ವಾರದ ಪತ್ರ

## ಪ್ರತಿಭೆ ಮಾನವೀಯತೆಯ ಸಂಗಮ

ಶುಭೋದಯ ಕರ್ನಾಟಕ ಅತ್ಯುತ್ತಮವಾಗಿ ಮೂಡಿ ಬರುತ್ತಿದೆ. ತಾ. 26.2.19 ರಂದು ಪ್ರಸಾರವಾದ ಕಂತಿನಲ್ಲಿ ತೆಂಕುತಿಟ್ಟಿನ ಖ್ಯಾತ ಯಕ್ಷಗಾನ ಭಾಗವತ ಸತೀಶ್ ಶೆಟ್ಟಿಯವರನ್ನು ಸಂದರ್ಶಿಸಲಾಯಿತು. ಸತೀಶ್ ಶೆಟ್ಟಿಯವರು ನಿಜಕ್ಕೂ ಪ್ರತಿಭೆ, ಮಾನವೀಯತೆಯ ಅದ್ಭುತ ಸಂಗಮ. ಅವರು ಅತ್ಯಂತ ನಿಗರ್ವಿ ಕೂಡ. ತನ್ನದೇನೂ ಇಲ್ಲ ಎನ್ನುತ್ತಲೇ ಅವರು ಕಲೆಗೆ, ಕಲಾವಿದರಿಗೆ ಮಾಡಿರುವ ಸೇವೆ ಅತ್ಯದ್ಭುತ ಸಂದರ್ಶನದಿಂದ ಅವರ ಬಗ್ಗೆ ಇದ್ದ ಅಭಿಮಾನ ನೂರ್ಮಡಿಯಾಯಿತು. ಕಲಾವಿದ ತಾನಾಯಿತು, ತನ್ನ ಕೆಲಸವಾಯಿತು ಎನ್ನುವುದಕ್ಕಿಂತ ಬೇರೆಯವರ ನೋವಿಗೆ ಸ್ಪಂದಿಸುವುದು ಅತ್ಯಂತ ಸ್ತುತ್ಯರ್ಹ ಕಾರ್ಯ.

—ಬಿಲ್ಲೇಶ್ವರ ಅಚ್ಚು, ಹುಂಚ

## ಹಾಸ್ಯ ಮತ್ತು ಕ್ರೌರ್ಯ

'ಕಲರ್ಸ್ ಸೂಪರ್'ನ 'ಪಾಪ ಪಾಂಡು' ಒಂದು ಉತ್ತಮ ಹಾಸ್ಯ ಧಾರಾವಾಹಿ ನಿಜ. ಆದರೆ ಹಾಸ್ಯವನ್ನು ಸೃಷ್ಟಿಸುವುದಕ್ಕಾಗಿ ಕೆಲವೊಮ್ಮೆ ಹಿಂಸೆಗೆ ಮೊರೆ ಹೋಗುತ್ತಾರೆ. ಇತ್ತೀಚೆಗೆ ಪುಂಡ ಹೆಂಡತಿಯನ್ನು ಹೊಡೆಯುವುದಲ್ಲದೆ ಕುಟುಂಬದ ಇತರರ ಮೇಲೆಯೂ ಕೈಮಾಡುತ್ತಾನೆ. ಹಿಂದೆ ಪ್ರಸಾರವಾದ ಸಂಚಿಕೆಯೊಂದರಲ್ಲಿ ಪಾಂಡುವಿನ ಮನೆಗೆ ಬಂದಿರುವ ಅಜ್ಜಿ, ಸೊಸೆ ಚಾರುಲತಾಳಿಗೆ 'ಒಳ ಶುಂಠಿ' ಎಂದು ಹೇಳಿ ತೊಡೆಯ ಮೇಲೆ ಚಿವುಟುತ್ತಾಳೆ. ಈ ರೀತಿಯ ದೈಹಿಕ ಹಿಂಸೆ ಹಾಸ್ಯವಾಗಿರದೆ ಕ್ರೌರ್ಯವಾಗಿರುತ್ತದೆ. ಸಂಭಾಷಣೆಯಲ್ಲಿ ಪಂಚ್ ಇರಲಿ, ದೈಹಿಕವಾದ ಪಿಂಚ್ ಬೇಡ ಎಂದು ಮನವಿ.

—ಎಚ್.ಎಸ್. ಶ್ರೀಮತಿ, ಬೆಂಗಳೂರು

## ಸಾರ್ಥಕ ಎನ್ನುವಂತಿರಬೇಕು

ಕಲರ್ಸ್ ಕನ್ನಡದಲ್ಲಿ ಪ್ರತಿ ಸಂಜೆ ಪ್ರಸಾರ ಆಗುತ್ತಿರುವ 'ಪುಟ್ಟ ಗೌರಿ ಮದುವೆ', 'ಲಕ್ಷ್ಮಿ ಬಾರಮ್ಮ'ವನ್ನು ನಾವು ನೋಡೋದು ನಿಲ್ಲಿಸಿ ತುಂಬಾ ತಿಂಗಳುಗಳೇ ಆಗಿವೆ. ಎಳೆದು ಎಳೆದು ಅನವಶ್ಯಕವಾಗಿ ಹೇಸಿಗೆ ಹುಟ್ಟಿಸುವ ಹಾಗಾಗುತ್ತಿವೆ. ಪ್ರೇಕ್ಷಕರನ್ನು ಅಪ್ರಬುದ್ಧ ದೃಷ್ಟಿಯಿಂದ ನೋಡುವ ಚಾನೆಲ್‌ನವರೂ ಇಂತಹ ಧಾರಾವಾಹಿಗಳನ್ನು ಕೂಡಲೇ ನಿಲ್ಲಿಸಬೇಕು. ಸಮಾಜಕ್ಕೆ ಸೃಜನಾತ್ಮಕ ಸಂದೇಶ ನೀಡುವ ಧಾರಾವಾಹಿಗಳನ್ನು ನೀಡಿ. ಹಣ ಕೊಟ್ಟು ನಿಮ್ಮ ಚಾನೆಲ್ ನೋಡಿದ್ದು ಸಾರ್ಥಕ ಆಗಬೇಕು.

—ಶಾಂತವೀರ ಎಸ್. ಚಿತ್ರದುರ್ಗ

## ನಿಗೂಢ ರಹಸ್ಯ

ಝೀ ಕನ್ನಡದಲ್ಲಿ ಮುಕ್ತಾಯವಾದ ಸರಿಗಮಪ 15ನೇ ಹಂತ ವಿವಾದಾತ್ಮಕ ಎನಿಸಿತು. ಯಾರೋ ಕೊನೆಯ ಹಂತ ತಲಪಬೇಕಾದವರು ಬಿಟ್ಟು ಇನ್ಯಾರೋ ತಲುಪಿದ್ದು ಒಂದು ರೀತಿಯ ನಿಗೂಢ ರಹಸ್ಯವೇ ಸರಿ. ಆ ಜಾಗಕ್ಕೆ ನಿಹಾಲ್, ಋತ್ವಿಕ್ ಹಾಗೂ ಕೀರ್ತನ ಹೊಳ್ಳ ಇರಬೇಕಿತ್ತು. ಅವರಲ್ಲಿ ಯಾರು ಬೇಕಾದರೂ ವಿನ್ನರ್ ಆಗಬಹುದಿತ್ತು. ಸಾಧ್ವಿನಿಕೊಪ್ಪ, ಹನುಮಂತು ಆಯ್ಕೆ ಪ್ರಶ್ನೆಯಾಗಿದೆ. ಅವರು ಆಯ್ಕೆ ಮಾಡಿಕೊಂಡ ಹಾಡುಗಳು ಆ ಹಂತಕ್ಕೆ ಸೂಕ್ತವಲ್ಲ. ಹೊಳ್ಳ ಅದ್ಭುತವಾಗಿ ಹಾಡಿ ಗೆದ್ದದ್ದು ಸರಿ. ಅವನಿಗೆ ಸರಿಯಾದ ಎದುರಾಳಿಗಳು ಎಂದರೆ ನಿಹಾಲ್ ಹಾಗೂ ಋತ್ವಿಕ್. ಅದ್ಭುತವಾಗಿ ಮೂಡಿಬಂದು ಕೊನೆಯಲ್ಲಿ ಕಗ್ಗಂಟಾದದ್ದು 'ನಿಗೂಢ ರಹಸ್ಯ'.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಅಡ್ಡದಾರಿ ಹಿಡಿದ ಸಂಸಾರ

'ಸುಬ್ಬಲಕ್ಷ್ಮಿ ಸಂಸಾರ' ಅಡ್ಡದಾರಿ ಹಿಡಿದಿದೆ ಎಂದು ಮೇಲುನೋಟಕ್ಕೆ ಅನಿಸುತ್ತದೆ. ಏಕೆಂದರೆ ಗಂಡ ಬೇರೊಂದು ಹೆಣ್ಣಿನ ಜೊತೆ ಸಂಸಾರ ಮಾಡುತ್ತಿರಬೇಕಾದರೆ, ತಾನೇನು ಕಮ್ಮಿ ಎಂದು ಹೆಂಡತಿಯಾದವಳು ಬೇರೊಬ್ಬರೊಂದಿಗೆ ಸಂಸಾರ ಮಾಡುತ್ತಿರುವವಳು. ಹೆಂಡತಿಯಂತೆ ಆತನ ತಲೆಗೆ ಎಣ್ಣೆ ಹಚ್ಚಿ ತಟ್ಟುವಳು. ಇದಕ್ಕೆ ಆತನ ತಾಯಿಯ ಸಹಕಾರ ಬೇರೆ ಇದೆ. ಸ್ವತಂತ್ರವಾಗಿ ಮನೆ ಮಾಡಬಹುದಿತ್ತು. ಇಲ್ಲ ಅತ್ತೆ ಮಾವನ ಮನೆಗೆ ಹೋಗಬಹುದಿತ್ತು. ಅದು ಬಿಟ್ಟು ಹೆಂಡತಿ ಇಲ್ಲದವನ ಮನೆಗೆ ಹೋಗಿ ಇರುವುದು ಎಷ್ಟರಮಟ್ಟಿಗೆ ಸರಿ. ದೃಶ್ಯ ಮಾಧ್ಯಮ ಪ್ರಬಲ ಮಾಧ್ಯಮವಾಗಿದ್ದು ಕೆಟ್ಟ ಸಂದೇಶ ನೀಡುತ್ತದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಅರ್ಥಪೂರ್ಣ ಧಾರಾವಾಹಿ

'ಅಪರಂಜಿ' (ಚಂದನ ವಾಹಿನಿ) ಬಹುರೂಪಿ ಸ್ತ್ರೀ ಮನುಕುಲ ಏಳಿಗೆಗಾಗಿ ಅನವರತ ಹಲವು ಮಾನವತಾ ಪಾತ್ರಗಳನ್ನು ಧರಿಸಿ ಪುರುಷ ಪ್ರಧಾನ ಸಮಾಜದಲ್ಲಿ ತನ್ನದೇ ಆದ ಮಾನವೀಯ ವ್ಯಕ್ತಿತ್ವದಿಂದ ಬದುಕು ಸಾಗಿಸುತ್ತಿರುವ ಪ್ರಸ್ತುತ ದಿನಗಳಲ್ಲಿ ಅವಳು ತನ್ನ ಬಾಳ ದಾರಿಯಲ್ಲಿ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸಿ ಅವುಗಳನ್ನು ಹೇಗೆ ಗೆಲ್ಲುತ್ತಾಳೆ ಎಂಬುದನ್ನು ವಿವರಿಸುತ್ತ ಮುಂದೆ ಸಾಗುತ್ತಿರುವ ವೀಕ್ಷಕರ ಮೆಚ್ಚುಗೆ ಪಡೆದ ಧಾರಾವಾಹಿ ಚಂದನ ಸಾಮಾಜಿಕ ಸಮಸ್ಯೆಗಳನ್ನು ಇಂತಹ ಧಾರಾವಾಹಿ ಈ ಮೂಲಕ ಅರ್ಥಪೂರ್ಣವಾಗಿ ಕಟ್ಟಿ ಕೊಡುತ್ತದೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಖಚಿತ ನಿಲುವಿಲ್ಲದ 'ಜಾನಕಿ'

'ಮಗಳು ಜಾನಕಿ' ವಿಭಿನ್ನ ಕತೆ ನೀಡುವ ಸೀತಾರಾಂ ಅವರ ಅಭಿಮಾನಿಗಳಿಗೆ ಅದ್ಭುತ ಅನುಭವ ನೀಡುತ್ತದೆ. ಈ ಧಾರಾವಾಹಿಯಲ್ಲಿ ಯಾವುದೇ ಖಚಿತ ನಿಲುವನ್ನೂ ಪ್ರಕಟಿಸದ ಜಾನಕಿ ದ್ವಂದ್ವದಲ್ಲೇ ಉಳಿದಿದ್ದಾಳೆ. ಆಕೆ ಈಗ ವಿವಾಹ ವಿಚ್ಛೇದನ ನೀಡುವುದೋ, ಬೇಡವೋ ಎಂಬ ಗೊಂದಲದಲ್ಲಿ ಪರದಾಡುತ್ತಿದ್ದಾಳೆ. ವಿವಾಹ ವಿಚ್ಛೇದನ ನೀಡದೇ ಕತೆಯನ್ನು ಸುಖಾಂತ್ಯ ಮಾಡುವ ಎಲ್ಲ ಲಕ್ಷಣಗಳೂ ಈಗಲೇ ವ್ಯಕ್ತವಾಗುತ್ತಿವೆ. ಅಸಹಾಯಕ ಪರಿಸ್ಥಿತಿಯಲ್ಲಿರುವ ಹೆಣ್ಣನ್ನು ಇನ್ನಷ್ಟು ಅಸಹಾಯಕತೆಗೆ ತಳ್ಳಿದಂತೆ ಆಗುವುದಿಲ್ಲವೇ?

—ಕೊ.ಸು. ನರಸಿಂಹ ಮೂರ್ತಿ, ಮೈಸೂರು

## ಪುರುಷರಿಗೂ ಮನ್ನಣೆ ಇರಲಿ

ಸೀತಾರಾಂ ಅವರಿಗೆ ಸ್ತ್ರೀ ಪಾತ್ರಗಳ ಮೇಲೆ ಮಮಕಾರ ಮತ್ತು ಪಕ್ಷಪಾತ ಜಾಸ್ತಿ. ಪುರುಷ ಪಾತ್ರಗಳ ಮೇಲೆ ಕಾಳಜಿ ಇಲ್ಲ ಎನ್ನುವುದು 'ಮಗಳು ಜಾನಕಿ'ಯಲ್ಲೂ ಎದ್ದು ಕಾಣುತ್ತಿದೆ . ಎಲ್ಲರೂ ಅಳುಮುಂಜಿಗಳೇ ಆಗಬೇಕೆ? ಒಬ್ಬರಾದರೂ ತಮ್ಮ ಕೆಲಸದಲ್ಲಿ ಶ್ರದ್ಧೆ, ವ್ಯವಹಾರದಲ್ಲಿ ವಿವೇಕ, ಸಾಮಾನ್ಯ ಬುದ್ಧಿವಂತಿಕೆ, ಚುರುಕು ಮಾತು ಇರಬೇಡವೇ? ನಿರಂಜನ ಮತ್ತು ಅವರಪ್ಪ, ಕಾಣದ ಶ್ಯಾಮಲತ್ತೆ, ಗಂಡ, ಮಧುಕರ, ಪ್ರಭಂಜನ ಎಲ್ಲರಿಗೂ ಸ್ವಲ್ಪವಾದರೂ ಚೂಟಿತನ ಮತ್ತು ಆತ್ಮವಿಶ್ವಾಸ ಬರುವಂತೆ ಮಾಡಿ ಸಿಎಸ್ಪಿ ಅವರೆ, ಬಹಳ ಬೇಸರದ ಸಂಗತಿಯೆಂದರೆ ಸಿಎಸ್ಪಿ ಕೂಡ ಬಹಳ ಸಪ್ಪೆಯಾಗಿಬಿಟ್ಟಿದ್ದಾರೆ. ಕಣ್ಣಲ್ಲಿ ನೀರು ಹಾಕುವುದನ್ನು ಸ್ವಲ್ಪ ಕಡಿಮೆ ಮಾಡಿ ಮೊದಲಿನಂತೆ ರೋಷ, ವ್ಯಂಗ್ಯ, ಆಕ್ರಮಣಕಾರಿ ವಕೀಲತನ, ತೋರಿಸಿ ಸ್ವಾಮೀ!

—ಎಂ.ಜಿ. ಶ್ರೀನಾಥ್, ಮೈಸೂರು

'ಜಾನಕಿ' ಚೆನ್ನಾಗಿದೆ: 'ಜಾನಕಿ' ತುಂಬಾ ಚೆನ್ನಾಗಿ ಬರುತ್ತಿದೆ. ಯಾರಿಗೂ ತಾಳ್ಮೆ ಇಲ್ಲ. ಇರುವ ಸ್ವಲ್ಪ ಸಮಯವನ್ನು ಎಲ್ಲರೂ ಎಂಜಾಯ್ ಮಾಡುವವರೆ. ಹಾಗಾಗಿ ಎಲ್ಲ ಹಳೆಯ ಧಾರಾವಾಹಿಗಳನ್ನು ದಯವಿಟ್ಟು ಮುಗಿಸಿ.

—ಪ್ರಮೀಳಾ ಷಣ್ಮುಖಿ, ಮೈಸೂರು